ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ,
<u>ಸಿ.ಸಿ. ನಂ.: 1525/2022</u>

..............................................................................

CW 01
PW 03

ಹೆಸರು : ಮಾರುತಿ ಗೌಡ
ತಂದೆಯ ಹೆಸರು : ಶಾಂತಾರಾಮ
ವಯಸ್ಸು : 40 ವರ್ಷ
ಉದ್ಯೋಗ : ರೈತಾಪಿ
ವಾಸಸ್ಥಳ : ಮುಗದಕೊಪ್ಪಾ, ತಾಃ ಹಳಿಯಾಳ.

ದಿನಾಂಕ 31-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u>** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 2 ರಿಂದ 5, 8 ರಿಂದ 10 ಪರಿಚಯ ಇದ್ದಾರೆ. ಉಳಿದವರ ಪರಿಚಯ ಇಲ್ಲ.

2022 ರಲ್ಲಿ ರಾತ್ರಿ 10.00 ಗಂಟೆಗೆ ಹೋಲಕ್ಕೆ ಹೋಗಿ ಬಂದು ಮೋಟಾರ ಸೈಕಲ್ ನಂ. ಕೆಎ-25-ಇಯು-9998 ನ್ನು ಮನೆಯ ಮುಂದೆ ನಿಲ್ಲಿಸಿದ್ದೆ, ಬೆಳಿಗ್ಗೆ 6.00 ಗಂಟೆಗೆ ಎದ್ದು ನೋಡಿದಾಗ ಗಾಡಿ ಇರಲಿಲ್ಲ. ನಾನು ನನ್ನ ಗೆಳೆಯರಾದ ಚಾಸಾ 8 ರಿಂದ 10 ರವರಿಗೆ ಗಾಡಿಯನ್ನು ತೆಗೆದುಕೊಂಡು ಹೋಗಿದ್ದಿರಾ ಎಂದು ವಿಚಾರಿಸಿ ಅವರೊಂದಿಗೆ 10 ದಿನ ಹುಡುಕಾಡಿದೆ. ನನ್ನ ವಾಹನ ಸಿಗಲಿಲ್ಲ. ಗಾಡಿ ಕಳುವು ಆಗಿದೆ ಎಂದು ಠಾಣೆಗೆ ದೂರು ನೀಡಿದೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ 2 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 2 ಎ ಎಂದು** ಗುರುತಿಸಲಾಯಿತು. ಅದೇ ದಿನ ಪೋಲಿಸರು ಮುಗದಕೊಪ್ಪದ ನಮ್ಮ ಮನೆಯ ಹತ್ತಿರ ಬಂದರು ಆಗ ನಾನು ಇದೇ ಜಾಗದಲ್ಲಿ ಮೋಟಾರ ಸೈಕಲ ಕಳ್ಳತನ ಆಗಿದೆ ಎಂದು ತೋರಿಸಿದೆ. ಆ ಜಾಗದಲ್ಲಿ ಪೋಲಿಸರು ಪಂಚನಾಮೆ ಮಾಡಿದರು. ಸದರಿ ಪಂಚನಾಮೆಯಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು

ಪಂಚನಾಮೆಯನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು **ನಿಪಿ 1 ಸಿ** ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೋಲಿಸರು ಭಾವಚಿತ್ರ ತೆಗೆದಿರುತ್ತಾರೆ ಸದರಿ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಪಿ 3** ಎಂದು ಗುರುತಿಸಲಾಯಿತು. ಕೆಲವು ದಿನಗಳ ನಂತರ ನಾನು ಠಾಣೆಗೆ ವಾಹನದ ಕುರಿತು ವಿಚಾರಿಸಲು ಹೋಗಿದ್ದೆ ಆಗ ಪೋಲಿಸರು ನನಗೆ ಆರೋಪಿತರು ಸಿಕ್ಕಿದ್ದಾರೆ ಎಂದು ಹೇಳಿದರು. ಠಾಣೆಯಲ್ಲಿ ನಿಮಗೆ ಯಾರನ್ನಾದರೂ ತೋರಿಸಿದರೆ ಎಂದರೆ ಇಲ್ಲ ಎನ್ನುತ್ತಾರೆ. ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಪೋಲಿಸರು ನನ್ನ ಪುನಃ ಹೇಳಿಕೆ ಪಡೆದಿಲ್ಲ. ಆನಂತರ ಪೋಲಿಸರು ನಮ್ಮ ಮನೆ ಬಳಿ ಇಬ್ಬರನ್ನು ಕರೆದುಕೊಂಡು ಬಂದಿದ್ದರು. ನನಗೆ ಅವರ ಹೆಸರು ಗೊತ್ತಿಲ್ಲ. ಅವರು ಯಾರು ಎಂದು ಹೇಳಲಾಗುವುದಿಲ್ಲ. ಯಾವ ಕಾರಣಕ್ಕಾಗಿ ಕರೆದುಕೊಂಡು ಬಂದ್ದಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿತರನ್ನು ಈ ಮೊದಲು ನೋಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿಃ 28-07-2022 ರಂದು ಪೋಲಿಸರಿಗೆ ಹೇಳಿಕೆ ನೀಡಿ ಅದರಲ್ಲಿ ಪೋಲಿಸರು ನಿಮಗೆ ಠಾಣೆಯಲ್ಲಿ 3 ಜನರನ್ನು ತೋರಿಸಿದರು -------------------------ಮೂಲ ಪಿರ್ಯಾದಕ್ಕೆ ಅಳವಡಿಸಿಕೊಳ್ಳಲು ವಿನಂತಿ ಎಂದು ನುಡಿದಿರುತ್ತಿರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಅಲ್ಲಗಳೆದ ಮೇರೆಗೆ ಅವರ ಹೇಳಿಕೆಯನ್ನು **ನಿಪಿ 4** ಎಂದು ಗುರುತಿಸಲಾಯಿತು.

ದಿಃ 28-07-2022 ರಂದು ಪೋಲಿಸರಿಗೆ ಮರು ಹೇಳಿಕೆ ನೀಡಿ ಅದರಲ್ಲಿ ದಿನಾಂಕಃ 07-06-2022 ರಂದು ---------------------------- ನನ್ನ ಪಿರ್ಯಾದಕ್ಕೆ ಅಳವಡಿಸಿಕೊಳ್ಳಲು ವಿನಂತಿ ಎಂದು ನುಡಿದಿರುತ್ತಿರಿ ಎಂದರೆ ಸರಿಯಲ್ಲ. ಸಾಕ್ಷಿಗೆ ಅಲ್ಲಗಳೆದ ಮೇರೆಗೆ ಅವರ ಹೇಳಿಕೆಯನ್ನು **ನಿಪಿ 5** ಎಂದು ಗುರುತಿಸಲಾಯಿತು. ಆರೋಪಿತರು ನಿಮ್ಮ ವಾಹನವನ್ನು ಕಳ್ಳತನ ಮಾಡಿದ್ದರೂ ಸಹಾ ನೀವು ನಿಪಿ 4 ಮತ್ತು 5 ರಂತೆ ಹೇಳಿಕೆ ನೀಡಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿ1,2 ಮತ್ತು 4 ಪರ ಶ್ರೀ ಜಿ ವಿ ಕೆ ವಕೀಲರಿಂದ

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಪೋಲಿಸರು ಬರೆದ ದೂರು ಮತ್ತು ಪಂಚನಾಮೆಗೆ ಸಹಿ ಮಾಡಿರುತ್ತಿರಿ ಎಂದರೆ ಸರಿ.

ಆರೋಪಿ 3 ರವರ ಪರ ವಕೀಲರು ಗೈರು ಹಾಜರಿದ್ದು ಅವರ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ**

ಮುಖ್ಯ ವಿಚಾರಣೆಯಲ್ಲಿ ವಾಹನ ಕಳ್ಳತನವಾದ 10 ದಿನಗಳ ನಂತರ ದೂರು ನೀಡಿರುತ್ತೇನೆ ಎಂದು ಬರೆದಿದ್ದು ಈಗ ಪಾಟೀ ಸವಾಲಿನಲ್ಲಿ ಪೋಲಿಸರು ಬರೆದ ದೂರಿಗೆ ಸಹಿ ಮಾಡಿರುತ್ತೇನೆ ಎಂದು ನುಡಿದಿದ್ದು ಯಾವುದು ಸರಿ ಎಂದರೆ ಸಾಕ್ಷಿ ಹೇಳಿದ ರೀತಿಯಲ್ಲಿ ಪೋಲಿಸರು ಬರೆದ ದೂರಿಗೆ ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ನನ್ನ ದೂರಿನಲ್ಲಿ ಬರೆದ ವಾಹನ ಸಂಖ್ಯೆ ಕೆಎ-25-9998. ಇದೇ ವಾಹನ ಕಳೆದಿದೆ ಎಂದು ದೂರಿನಲ್ಲಿ ಹೇಳಿ ಬರೆಯಿಸಿ ಸಹಿ ಮಾಡಿರುತ್ತೀರಿ ಎಂದರೆ ಸರಿ. ಪಾಟೀ ಸವಾಲಿನಲ್ಲಿ ಪೋಲಿಸರು ಬರೆದ ದೂರಿಗೆ ಸಹಿ ಮಾಡಿರುತ್ತೇನೆ ಎಂದು ಆರೋಪಿತರಿಗೆ ಸಹಾಯ ಮಾಡಲು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.